ದಿನಾಂಕಃ 02-12-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಬಿ.ಎಸ್. ವಕೀಲರಿಂದ**

ನಾನು ಮೈಸೂರಿನಲ್ಲಿ 20 ವರ್ಷದಿಂದ ವಾಸವಿರುತ್ತೇನೆ. ನಮ್ಮ ತಂದೆ ನಾವು 3 ಜನ ಅಣ್ಣತಮ್ಮದಿಂರು ಎಲ್ಲರ ಜೊತೆ ವಾಸವಿರುತ್ತಾರೆ. ನಮ್ಮ ತಂದೆ ನಮ್ಮ ಜೊತೆ ವಾಸವಿಲ್ಲ ಎಂದು ಪ್ರತಿವಾದಿ ಹೇಳುತ್ತಾರೆಂದರೆ ಸರಿಯಲ್ಲ. ಸಾಗುವಳಿಯಿಂದ ಬಂದ ಜಮೀನು ನಮ್ಮ ಅಣ್ಣ-ತಮ್ಮಂದಿರ ಹೆಸರಿಗೆ ಖಾತೆ ಆಗಿರುತ್ತದೆಂದರೆ ಸರಿ. ಒಟ್ಟು ವಿಸ್ತೀರ್ಣ 6 ಎಕರೆ 13

ಗುಂಟೆ ನಮ್ಮ ಕುಟುಂಬದ ಹೆಸರಿಗೆ ಖಾತೆ ಇರುತ್ತದೆಂದರೆ ಸಾಕ್ಷಿಯು ನಮ್ಮ ತಾಯಿಗೆ ಸೇರಿದ ಸಾಗುವಳಿ ಜಮೀನು ಎಂದು ನುಡಿಯುತ್ತಾರೆ. ಸದರಿ ವಿಸ್ತೀರ್ಣದಲ್ಲಿ 2 ಎಕರೆ ಮತ್ತು ದಾವಾ ಆಸ್ತಿ ಪ್ರತಿವಾದಿ ಹೆಸರಿಗೆ ಖಾತೆ ಆಗಿರುತ್ತೆಂದರೆ ಸರಿಯಲ್ಲ. ಪ್ರತಿವಾದಿಗೆ 5 ಎಕರೆ 20 ಗುಂಟೆ ಜಮೀನು ಇರುವುದು ಎಂದರೆ ಸರಿ. ನಮ್ಮ ತಂದೆ ಮತ್ತು ಪ್ರತಿವಾದಿಯ ನಡುವೆ ಮೌಖಿಕ ವಿಭಾಗದಲ್ಲಿ ನಮ್ಮ ತಂದೆಗೆ 6 ಎಕರೆ 13 ಗುಂಟೆ ಜಮೀನು ಬಂದಿರುತ್ತೆಂದರೆ ಸರಿ. ಮೌಖಿಕ ವಿಭಾಗ ಪತ್ರ ಆಗಿ 6 ಎಕರೆ ಸಾಗುವಳಿ ಜಮೀನು ಈ-ಸ್ಕೆಚ್ ಆಗದ ಕಾರಣ ನಮ್ಮ ತಂದೆ ನಿಪಿ-2 ರಂತೆ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಒಂದು ವೇಳೆ ಪ್ರತಿವಾದಿ ನಮ್ಮ ತಂದೆಗೆ ಮೋಸಮಾಡುವ ಉದ್ದೇಶವಿದ್ದರೆ ಹಕ್ಕು ಖುಲಾಸೆ ಪತ್ರದಲ್ಲಿ ಸ.ನಂ. 18/1 ರಲ್ಲಿನ ಉಳಿಕೆ 2 ಎಕರೆ 13 ಗುಂಟೆ ನಿಪಿ-2 ರಲ್ಲಿ ಸೇರಿಸುತ್ತಿದ್ದರು ಎಂದರೆ ಸಾಕ್ಷಿಯು ಅದು ಪೋಡಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಿಪಿ-2 ನ್ನು ಮೋಸದಿಂದ ಬರೆಸಿಕೊಂಡಿರುವುದಿಲ್ಲ ನಮ್ಮ ತಂದೆಯೇ ಸ್ವಇಚ್ಛೆಯಿಂದ ಬರೆಸಿರುತ್ತಾರೆ ಎಂದರೆ ಸರಿಯಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.